ಅಲ್ಪ ಕಾಲಾವಧಿ ಪ್ರಶ್ನೆ

ಸಂಕೇಶ್ವರ ಪಟ್ಟಣಕ್ಕೆ ಕರ್ಫ್ಯೂರಿ ಹಳ್ಳದ ಯೋಜನೆ ಮಂಜೂರು ಮಾಡುವ ಬಗ್ಗೆ

೧೭ ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ಹಾಗೂ ಆಹಾರ, ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(೧) ಸಂಕೇಶ್ವರ ನಗರಕ್ಕೆ ಕರ್ಫ್ಯೂರಿ ಹಳ್ಳದ ಯೋಜನೆಯು ಅನ್ವಯು ಕುಡಿಯುವ ನೀರನ್ನೊದಗಿಸಬೇಕೆಂದು ಸರ್ಕಾರದವರಿಗೆ ಅನೇಕ ಮನವಿಗಳನ್ನು ಸಲ್ಲಿಸಿದ್ದು ಈ ವಿಷಯವು ಸದನದಲ್ಲಿ ಪ್ರಸ್ತಾಪ ಮಾಡಿರುವುದು ನಿಜವಲ್ಲವೆ ;

(೨) ಹಾಗಿದ್ದಲ್ಲಿ ಸದರಿ ಯೋಜನೆಯಂ ವಿಳಂಬವಾಗಲಂ ಕಾರಣವೇನು ;

(೩) ಈ ಯೋಜನೆಯು ನೀಲಿ ನಕ್ಷೆ ತಯಾರಾಗಿರುವುದು ನಿಜವಲ್ಲವೆ?

(೪) ಈ ಯೋಜನೆಯ ಬಗ್ಗೆ ಅಂತಿಮ ತೀರ್ಮಾನವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು,ಸಂಸದೀಯ ವ್ಯವಹಾರ ಹಾಗೂ ಆಹಾರ ಮಂತ್ರಿಗಳು).—

(೧) ನಿಜ

(೨) ಇಂಪೌಂಡಿಂಗ್ ಜಲಾಶಯ ಕಟ್ಟಿಸಲಂ ಬೇಕಾದ ಜಮೀನು ಕರ್ನಾಟಕ ನಗರ ನೀರಂ ಸರಬರಾಜು ಮತ್ತು ಒಳಚರಂಡಿ ಮಂಡಲಿಯಂ ವಶಕ್ಕೆ ತೆಗೆದುಕೊಳ್ಳಲಂ ಭೂ ಮಾಲಿಕರು ಆತಂಕ ಪಡಿಸಿದ್ದರಿಂದ ಯೋಜನೆ ಸಿದ್ಧಗೊಳಿಸಲು ತಡವಾಗಿದೆ.

(೩) ನಿಜ

(೪) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಶ್ರೀ ಕೆ. ಎಚ್. ಪಾಟೀಲ್ – ಬಹಳ ಭೀಕರವಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ತಾಂತ್ರಿಕ ವರದಿ ಯಾವ ಯೋಜನೆ ಮಾಡಬೇಕೆಂದು ಸರ್ಕಾರಕ್ಕೆ ಬಂದಿದೆಯೆಂದು ಕೇಳುತ್ತೇನೆ. ಈ ಯೋಜನೆ ಅನುಷ್ಠಾನಕ್ಕೆ ಬರಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ನಗರಾಭಿವೃದ್ಧಿ ಮಂತ್ರಿಗಳು ಮತ್ತು ನಾನು ಎಲ್ಲರೂ ಸೇರಿಕೊಂಡು ಚರ್ಚೆ ಮಾಡುವುದಕ್ಕೆ ಯಾವಾಗ ಸಮಯ ಕೊಡುತ್ತೀರಿ ಎಂದು ಕೇಳುತ್ತೇನೆ ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ನನ್ನಲ್ಲಿಗೆ ಯಾವಾಗ ಬೇಕಾದರೂ ಬರಬಹುದು ; ಅದಕ್ಕೆ ನನ್ನ ಅಭ್ಯಂತರವಿಲ್ಲ. ಮೊದಲು ಕರ್ಫ್ಯೂರಿ ಜಲಾಶಯವನ್ನು ಸ್ಥಾಪರವನ್ನಾಗಿ ಇಟ್ಟುಕೊಂಡು ಶಾಶ್ವತವಾಗಿ ನೀರನ್ನು ಕೊಡುವುದಕ್ಕೆ ಯೋಜನೆ ಮಾಡುವುದಕ್ಕೆ ತೊಂದರೆಯಿದೆ. ಪೂರಣಿ ಯೋಜನೆ ತೆಗೆದುಕೊಳ್ಳತಕ್ಕ ಕಾರ್ಯಕ್ರಮವಿದೆ. ಅದಕ್ಕೆ ಹುಡ್ಕೋದವರ ನೆರವನ್ನು ಕೇಳಿದ್ದೇವೆ. ತಾವು ಒಪ್ಪಿಕೊಂಡರೆ ಆಗಬಹುದು, ತಾವು ಬೇಡ ಅಂದರೆ ಅದನ್ನು ಇಲ್ಲಿಗೆ ಬಿಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್. —ಸಂಕೇಶ್ವರ ಬಹಳ ದೊಡ್ಡ ಪಟ್ಟಣ ಇದೆ. ಅಲ್ಲಿ ನೀರಿನ ಅನಾನುಕೂಲವಿದೆ. ನೀರು ಸಾಕಷ್ಟು ಸಿಗುತ್ತದೆ ಎನ್ನುವುದು ವರದಿಯಿಂದ ಗೊತ್ತಿದೆ. ಮಂತ್ರಿಗಳು ಯಾವಾಗ ಬೇಕಾದರೂ ನನ್ನನ್ನು ಭೇಟಿಯಾಗಬಹುದೆಂದು ಹೇಳುತ್ತಾರೆ. ತಮ್ಮದು ಟ್ರಾವಲಿಂಗ್ ಆಫೀಸ್ ಇರುತ್ತದೆ. ಸಂಕೇಶ್ವರ ಪಟ್ಟಣಕ್ಕೆ ಇರುವ ನೀರಿನ ಅನಾನುಕೂಲತೆ ಹೋಗಲಾಡಿಸಬೇಕು. ಸಂಕೇಶ್ವರದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿವೆ. ನೀರಿನ ಕೊರತೆಯನ್ನು ನೀಗುವುದಕ್ಕೆ ತಮ್ಮ ಪರ್ಚನ್ಸನ್ನಿ ಮಾನ್ಯ ಮುಖ್ಯಮಂತ್ರಿಗಳವರಿಗೆ ಬೀರಿ ಹೆಚ್ಚು ಹಣವನ್ನು ಪಡೆದು ಕರ್ಫ್ಯೂರಿ ಜಲಾಶಯದಿಂದ ನೀರನ್ನು ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ವಿಟಮಿನ್ 'ಎಂ'ನ ಕೊರತೆಯಿದೆ. ಮುಖ್ಯಮಂತ್ರಿಗಳವರನ್ನು ನೀಳಿ ನೋಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಸಂಕೇಶ್ವರಕ್ಕೆ ಬಂದಿದ್ದಾಗ ೨ ಕೋಟಿ ರೂಪಾಯಿ ಕೊಡುತ್ತೇನೆಂದು ಸಾರ್ವಜನಿಕವಾಗಿ ಹೇಳಿಕೆ ಮಾಡಿದ್ದಾರೆ. ಈ ಸದನದಲ್ಲಿಯೂ ಸಹ ಹೇಳಿದ್ದಾರೆ. ಕಳೆದ ಏಳೆಂಟು ದಿವಸಗಳಲ್ಲಿ ನಗರಾಭಿವೃದ್ಧಿ ಮಂತ್ರಿಗಳು ಹಾನೂ ನೀವು ಸೇರಿ ಅದನ್ನು ಫೈನಲ್ ಮಾಡೋಣವೆಂದು ಹೇಳಿದ್ದಾರೆ. ಇಲ್ಲಿ ವಿಟಮಿನ್ 'ಎಂ' ಏನೂ ಬೇಕಾಗಿಲ್ಲ. ಲಕ್ಷ್ಮೀ ಮತ್ತು ಸಾಗರ ಕೂಡಿದರೆ ಅದು ಆಗಂತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯ ಮಂತ್ರಿಗಳ ಸಮಯ ನೋಡಿಕೊಂಡು ಭೇಟಿಯಾಗೋಣ.

ಚಳ್ಳಕೆರೆ ತಾಲ್ಲೂಕಿನ ಹಳ್ಳಿಯ ಕೊಳವೆ ಬಾವಿಗಳ ಬಗ್ಗೆ

೬೯೭. (ಸ) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಳ್ಳಕೆರೆ ತಾಲ್ಲೂಕಿನ ಹಳ್ಳಿಗಳಲ್ಲಿ ಕಂಡಿಯುವ ನೀರಿಗೋಸ್ಕರ ತೋಡಿಸಿದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು, ಹಾಗೂ ಅವುಗಳಲ್ಲಿ ಎಷ್ಟು ವಿಫಲವಾಗಿವೆ ?

ಆ) ಕೆಲವು ಬಾವಿಗಳಲ್ಲಿ ನೀರಿದ್ದು ದುರಸ್ಥಿಯಿಲ್ಲದೆ ಉಪಯೋಗಕ್ಕೆ ಬಾರದಿರುವ ಬಾವಿಗಳ ಸಂಖ್ಯೆ ಎಷ್ಟು, ಇವುಗಳ ದುರಸ್ಥಿಗೆ ಸರಕಾರದವರು ತ್ವರಿತವಾಗಿ ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ತೋಡಿಸಿಲಾದ ಕೊಳವೆ ಬಾವಿಗಳ

ಸಂಖ್ಯೆ	೧೦೫೧
ವಿಫಲವಾದವುಗಳು	೧೩೨

ಆ) ದುರಸ್ತಿ ಇಲ್ಲದೆ ನೀರಿರುವ ಕೊಳವೆ ಬಾವಿಗಳು ಉಪಯೋಗಕ್ಕೆ ಬಾರದೇ ಇರುವುದು ಯಾವುದೂ ಇರುವುದಿಲ್ಲ.

ನೀರಿರುವ ಕೊಳವೆ ಬಾವಿಗಳ ಕೈಪಂಪುಗಳು ಕೆಟ್ಟ ಕೂಡಲೇ ದುರಸ್ತಿ ಮಾಡಲಾಗುತ್ತದೆ.

ಶ್ರೀ ತಿಪ್ಪೇಸ್ವಾಮಿ.— ಮಾನ್ಯ ಅಧ್ಯಕ್ಷರೆ ಏನಾಗಿದೆ ಅಂದರೆ, ಕೆಲವು ಬೋರ್‌ಗಳಲ್ಲಿ ಅಕಸ್ಮಾತಾಗಿ ಪೈಪು ಒಳಗೆ ಹೋಗಿ ನೀರು ಬಾರದೆ ತೊಂದರೆಯಾಗಿರುತ್ತದೆ. ಬೋರನ್ನು ರಿಪೇರಿ ಮಾಡಿದರೆ ಅವು ಉಪಯೋಗಕ್ಕೆ ಬರತ್ತವೆ. ಅಂಥ ರಿಪೇರಿಯನ್ನು ಮಾಡಿಸಲಾಗುತ್ತದೆಯೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಂತಹ ಗ್ರಾಮಗಳಲ್ಲಿ ಈ ಕೆಲಸವಿದೆಯೆಂದು ಮಾನ್ಯ ಸದಸ್ಯರು ಬರೆದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮೈಸೂರು ನಗರ ಯೋಜನಾ ಪ್ರಾಧಿಕಾರದಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರ ಬಗ್ಗೆ.

೬೯೪. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರ ಯೋಜನಾ ಪ್ರಾಧಿಕಾರದಲ್ಲಿ ಹಂಗಾಮಿಯಾಗಿ ಎಷ್ಟು ಮಂದಿ ಕೆಲಸ ಮಾಡುತ್ತಿದ್ದಾರೆ ಹಾಗೂ ಎಷ್ಟು ವರ್ಷಗಳಿಂದ,